Misc 21-2022
Pw1

ದಿನಾಂಕ 08.07.2025 ರಂದು ವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಃ ಎದುರುದಾರರ ಪರ ವಕೀಲರಿಂದಃ**

ನಾನು ಪದವಿದರೆ. ನಾನು ಗೃಹಿಣಿ. ನೀವು 2018 ರಲ್ಲಿ ಮಾದವರದಲ್ಲಿ ವಾಸವಾಗಿರುತ್ತಿರಿ ಎಂದರೆ ದಾಸನಪುರದಲ್ಲಿ ವಾಸವಾಗಿದ್ದೆ ಎಂದು ನುಡಿದಿರುತ್ತಾರೆ. ನಿಮ್ಮ ತಂದೆಯ ಹೆಸರು ಏನು ಎಂದರೆ ಗಂಗಹನುಮಯ್ಯ ಹಾಗೂ ನನ್ನ ತಾಯಿಯ ಹೆಸರು ಅಶ್ವಥಮ್ಮ ಎಂದು ನುಡಿದಿರುತ್ತಾರೆ. ನಿಮ್ಮ ತಾಯಿ ಅಶ್ವಥಮ್ಮ ರವರು ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷರಾಗಿರುತ್ತಾರೆ ಎಂದರೆ ಸರಿ. ನಿಮ್ಮ ತಂದೆ ತಾಯಿಗೆ ಇಬ್ಬರೆ ಹೆಣ್ಣು ಮಕ್ಕಳಿದ್ದು ಗಂಡು ಮಕ್ಕಳು ಇರುವುದಿಲ್ಲ ಎಂದರೆ ಸರಿ. ನಿಮ್ಮ ತಂದೆ ತಾಯಿಗೆ ಗಂಡು ಮಕ್ಕಳು ಇಲ್ಲದೆ ಇರುವ ಕಾರಣ ನೀವು ಅವರ ಜೊತೆ ವಾಸವಾಗಿರುತ್ತೀರಿ ಎಂದರೆ ಕಳೆದ 3-4 ವರ್ಷಗಳಿಂದ ವಾಸವಾಗಿರುತ್ತೇನೆ ಎಂದು ನುಡಿದಿರುತ್ತಾರೆ. ನೀವು ಈಗ ವಾಸವಾಗಿರುವ ಮನೆಯು ನಂದೀಶ್ವರ ಬಡಾವಣೆಯಲ್ಲಿ ಇರುತ್ತದೆ ಎಂದರೆ ಸರಿ. ನಿಮ್ಮ ಮನೆಯು ಪ್ರಗತಿ ಸ್ಕೂಲ್ ಪಕ್ಕದಲ್ಲಿದೆ ಎಂದರೆ ಸದರಿ ಸ್ಕೂಲ್ 13 ನೇ ಕ್ರಾಸ್ ನಲ್ಲಿ ಇದ್ದು ನಾವು 14 ನೇ ಕ್ರಾಸ್ ನಲ್ಲಿ ಇರುತ್ತೇವೆ ಎಂದು ನುಡಿದಿರುತ್ತಾರೆ. ನಿಪಿ-5 ರಲ್ಲಿ ಇರುವ ವಿಳಾಸಕ್ಕೆ ಅಂಚೇ ಮುಖಾಂತರ ನೋಟಸ್ ತಲುಪುತ್ತದೆ ಎಂದರೆ ಸರಿಯಲ್ಲ. ನಿಪಿ-5 ರ ಲಕೋಟೆ ನಿಮ್ಮ ವಿಳಾಸಕ್ಕೆ ತಲುಪಿರುತ್ತದೆ ಎಂದರೆ ಸರಿಯಲ್ಲ. ನಿಪಿ-5 ನಿಮಗೆ ಹೇಗೆ ಬಂದಿರುತ್ತದೆ ಎಂದರೆ ನಮ್ಮ ತಾಯಿ ತಂದು ಕೊಟ್ಟಿರುತ್ತಾರೆ ಎಂದು ನುಡಿದಿರುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಳಾಸಕ್ಕೆ ಅಂಚೇ ಮೂಲಕ ಪತ್ರಗಳನ್ನು ಕಳುಹಿಸಿದರೆ ತಲುಪುತ್ತದೆ ಎಂದರೆ ಸರಿ. ನೀವು ಅಸಲು ದಾವಾ ಸಂಖ್ಯೆ 503/2018 ರ ಸಂಬಂಧ ನ್ಯಾಯಾಲಯದಿಂದ ನೋಟಿಸ್ ಅನ್ನು ಪಡೆದುಕೊಂಡಿದ್ದರು ಸಹ ಉದ್ದೇಶ ಪೂರ್ವಕವಾಗಿ ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಮ್ಮ ತಾಯಿಯವರು ನಿಪಿ-5 ನ್ನು ನಿಮಗೆ ನೀಡಿದ ನಂತರ ವಕೀಲರನ್ನು ಭೇಟಿ ಮಾಡಿರುತ್ತೀರಾ ಎಂದರೆ ಹೌದು ಎಂದು ನುಡಿದಿರುತ್ತಾರೆ. ನಿಪಿ-5 ನ್ನು ಪಡೆದುಕೊಂಡ ನಂತರ ನೀವು ದಾವಾವನ್ನು ನಡೆಸಬಹುದಾಗಿತ್ತು ಎಂದರೆ ನಮ್ಮ ಗಮನಕ್ಕೆ ಬಂದ ನಂತರ ಈ ದಾವಾವನ್ನು ಸಲ್ಲಿಸಿರುತ್ತೇವೆ ಎಂದು ನುಡಿದಿರುತ್ತಾರೆ. ಅಸಲು ದಾವಾ ಸಂಖ್ಯೆ 503/2018 ರಲ್ಲಿ ಉದ್ದೇಶ ಪೂರ್ವಕವಾಗಿ ನೀವು ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಗಿದೆ)

ಓ ಹೇ ಕೇ ಸ ಇದೆ

**1ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ನೆಲಮಂಗಲ.**